ಆ) ಈ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದರೂ, ಹಣ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಹಣ ಪಾವತಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಲೆ.ಶೀ.3054–12ನೇ ಹಣಕಾಸಿನ ಯೋಜನೆಯಡಿ ರೂ.9453.36ಲಕ್ಷಗಳ ಬಿಲ್ಲುಗಳು ಮತ್ತು ಲೆ.ಶೀ.2059–12ನೇ ಹಣಕಾಸಿನ ಯೋಜನೆಯಡಿ ರೂ.695.82ಲಕ್ಷಗಳ ಬಿಲ್ಲುಗಳು ಬಾಕಿ ಇರುತ್ತದೆ.

ಆ) ಬಂದಿರುತ್ತದೆ.

ಇ) 2009–10ನೇ ಸಾಲಿನಲ್ಲಿ ಭಾರತ ಸರ್ಕಾರದಿಂದ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸದರಿ ಯೋಜನೆಯಡಿ ರಸ್ತೆ ನಿರ್ವಹಣೆಗೆ ಒದಗಿಸಲಾಗಿದ್ದ ರೂ.1461.5.00ಲಕ್ಷಗಳ ಅನುದಾನದಲ್ಲಿ ರೂ.5000.00ಲಕ್ಷಗಳ ಅನುದಾನವನ್ನು ಹಿಂಪಡೆಯಲಾಗಿರುತ್ತದೆ. ಆದ್ದರಿಂದ ಲೆ.ಶೀ3054–(ಯೋಜನೇತರ)ದಡಿ ಬಾಗಿ ಬಿಲ್ಲುಗಳು ಉಳಿದಿದ್ದು, ಈ ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡುವ ಸಲುವಾಗಿ ಹಣ ಬಿಡುಗಡೆ ಮಾಡುವಂತೆ ಪ್ರತೀ ಮಾಹೆಯೂ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ. ಬಾಕಿ ಬಿಲ್ಲುಗಳನ್ನು ಆಧರಿಸಿ ಮತ್ತು ರಾಜ್ಯದ ಸಂಪನ್ಮೂಲವನ್ನಾಧರಿಸಿ ಆರ್ಥಿಕ ಇಲಾಖೆಯಿಂದ ಬಿಡುಗಡೆ ಮಾಡಲಾಗುವ ಹಣಕ್ಕನುಗುಣವಾಗಿ ಹಂತ ಹಂತವಾಗಿ ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಇಷ್ಟೇ ಅಲ್ಲದೇ, ಸದರಿ ಯೋಜನೆಯಡಿ ಹಣ ಬಿಡುಗಡೆ ಮಾಡುವ ಸಲುವಾಗಿ ಪೂರಕ ಆಯವ್ಯಯದಲ್ಲಿ ಹೆಚ್ಚುವರಿ ಅನುದಾನ ಒದಗಿಸುವಂತೆಯೂ ಸಹಾ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

ಕೃಷಿ ಉತ್ತೇಜನಗಳು

213(402) ಶ್ರೀ ಶಿವಲಿಂಗೇಗೌಡ ಕೆ ಎಂ:(ಅರಸೀಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿಗೆ ಸಂಬಂಧಪಟ್ಟ ಉತ್ತೇಜನಗಳನ್ನು ನೀಡಲು ಖಾಸಗಿ ಸಂಸ್ಥೆಗಳ ಮುಖಾಂತರ ಕೆಲಸ ನಿರ್ವಹಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಂಸ್ಥೆಗಳಿಂದ ರೈತರಿಗೆ ಆಗುತ್ತಿರುವ ಕೆಲವೊಂದು ಅನ್ಯಾಯಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಕೊಬ್ಬರಿ ಖರೀದಿಗೆ ಬೆಂಬಲ ಬೆಲೆ

214(403) ಶ್ರೀ ಶಿವಲಿಂಗೇಗೌಡ ಕೆ ಎಂ:(ಅರಸೀಕೆರೆ) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೀನ ವರ್ಷಗಳಲ್ಲಿ ಕೊಬ್ಬರಿ ದರ ಬಹಳ ಕುಸಿದು ಬಹುತೇಕ ಎಲ್ಲಾ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಾಜ್ಯ ಸರ್ಕಾರ ಬೆಂಬಲ ಬೆಲೆ ನೀಡಿ ಕೊಬ್ಬರಿ ಖರೀದಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆಯೇ

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) ಗಮನಕ್ಕೆ ಬಂದಿದೆ.

ಹಿಂದಿನ 3 ವರ್ಷಗಳಲ್ಲಿ ಕೊಬ್ಬರಿಯ ಸರಾಸರಿ ಮಾದರಿ ಬೆಲೆ ಹಾಗೂ ಬೆಂಬಲ ಬೆಲೆ ಈ ಕೆಳಗಿನಂತಿರುತ್ತದೆ.

ವರ್ಷ	ಸರಾಸರಿ ಮಾದರಿ ಬೆಲೆ (ರೂ.ಪ್ರತೀ ಕ್ವಿಂ.ಗೆ)	ಬೆಂಬಲ ಬೆಲೆ (ರೂ.ಪ್ರತೀ ಕ್ವಿಂ.ಗೆ)
2007–08	3.784/–	3,910/–
2008–09	4,2771/–	4,700/–
2009–10	4.533/–	4,700/– +300/–
2010–11	4,349/–	4,700/–